Jun 2011 VOL 2 ISSUE 3

# || ಮಾಹಿತಿ ||

## ತಾಯಿತಂದೆ ಹಾಗು ಶಿಕ್ಷಕರಿಗಾಗಿ ಒಂದು ಸುದ್ದಿಪತ್ರ

## ಸಂಪಾದಕರಿಂದ

ಪ್ರಿಯ ಓದುಗರೇ,

ರಜೆಯ ನಂತರ ನೀವೆಲ್ಲ ಹೊಸ ಹುರುಪಿನಿಂದ ಹಾಗೂ ನವ ಚೈತನ್ಯದಿಂದ ಹಿಂದಿರುಗಿದ್ದೀರೆಂದು ಆಶಿಸುತ್ತೇನೆ. ಕಳೆದ ಸಂಚಿಕೆಯಲ್ಲಿ ನಾವು ಮಕ್ಕಳು ಶಾಲೆಗೆ ಹೋಗುವುದಕ್ಕೂ ಮುಂಚಿನ ವರ್ಷಗಳಲ್ಲಿ 'ಓದುವುದರ' ಹಾಗೂ ಆ ಪ್ರಕ್ರಿಯೆಯ ಮಹತ್ವದ ಬಗ್ಗೆ ವಿಚಾರ ಮಾಡಿದ್ದೇವೆ.ಈ ಸಂಚಿಕೆಯಲ್ಲಿ ಮಕ್ಕಳಿಗೆ ಓದುವುದನ್ನು ಕಲಿಸುವ ವಿಭಿನ್ನ ರೀತಿಗಳ ಬಗ್ಗೆ ಗಮನ ಹರಿಸೋಣ. ಓದುವುದರ ಮಹತ್ವ ಎಷ್ಟು ಬಾರಿ ಪುನರಾವರ್ತಿಸಿದರೂ ಕಡಿಮೆ. ಮಕ್ಕಳು ಶಾಲೆಗೆ ಹೋಗುವುದಕ್ಕೂ ಮುನ್ನವೇ ಓದುವುದನ್ನು ಕಲಿಯಲು ಆರಂಭಿಸುವುದರಿಂದ, ಓದುವುದನ್ನು ಕಲಿಸುವ ವಿಧಾನಗಳ ಬಗ್ಗೆ ಗಮನ ಕೊಡುವುದೂ ಸಹ ಅತಿ ಮುಖ್ಯ. ಪುಟ್ಟ ಮಕ್ಕಳಿಗೆ ಓದುವುದನ್ನು ಕಲಿಸುವುದರ ಪ್ರತಿಯೊಂದು ಹಜ್ಜೆಯ ಬಗ್ಗೆ ನಾನಿಲ್ಲಿ ವಿವರ ನೀಡುತ್ತಿಲ್ಲ (ಅದಕ್ಕೆ ತರಗತಿಯಲ್ಲಿ ಹೇಳಿಕೊಡುವ ಅನುಭವದ ಜೊತೆಗೆ ಪೂರ್ತಿ ಪುಸ್ತಕವೇ ಬೇಕಾಗುತ್ತದೆ), ಓದುವುದನ್ನು ಕಲಿಸುವ ವಿವಿಧ ವಿಧಾನಗಳ ಪರಿಚಯ ಮಾಡಿಸುವುದಷ್ಟೇ ನನ್ನ ಧ್ಯೇಯ. ನೀವುಗಳು ಈ ವಿಷಯದ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನವನ್ನು ನಡೆಸಿ, ಈ ವಿಧಾನಗಳ ಲ್ಲಿ ನಿಮಗೆ ಬೇಕಾದ ವಿಧಾನಗಳನ್ನು ಆರಿಸಿಕೊಳ್ಳಬಹುದು.

ಮಕ್ಕಳು ಚೆನ್ನಾಗಿ ಓದುವುದನ್ನು ಕಲಿತರೆ, ಅವರು ಓದಿದ್ದನ್ನು ಅರ್ಥಮಾಡಿಕೊಳ್ಳುತ್ತಾರೆ ಜೊತೆಗೆ ಸರಿಯಾಗಿ ಬರೆಯಲೂ ಸಹ ಕಲಿಯುತ್ತಾರೆ. ಇವು ಪ್ರಾಥಮಿಕ ಶಾಲೆಯಲ್ಲಿ ಎಷ್ಟು ಮುಖ್ಯ ಎಂಬುವುದು ನಮಗೆಲ್ಲಾ ಗೊತ್ತಿರುವ ವಿಚಾರ. ತಾಯಿತಂದೆಯರಿಗೆ ಈ ಸಂಚಿಕೆಯ ಕೆಲವು ಭಾಗಗಳು ಅಸಂಭದ್ದ ಅನ್ನಿಸಬಹುದು. ಆದರೆ, ನನ್ನ ಪ್ರಕಾರ ನಿಮ್ಮ ಮಕ್ಕಳು ಶಾಲೆಯಲ್ಲಿ ಓದುವುದನ್ನು ಹೇಗೆ ಕಲಿಯುತ್ತಾರೆಂದು ತಿಳಿದುಕೊಳ್ಳುವುದು ಹಾಗೂ ಅರ್ಥಮಾಡಿಕೊಳ್ಳುವುದು ನಿಮಗೂ ಸಹ ಉಪಯುಕ್ತ.

**ಗಾಯತ್ರಿ ಕಿರಣ್**
**ಅನುವಾದ: ಗೀತಾ ನಾಗೇಶ್**




### ಈ ಸಂಚಿಕೆಯಲ್ಲಿ

## ಓದುವುದನ್ನು ಕಲಿಸುವ ವಿಧಾನಗಳು

samyukta
CHILD DEVELOPMENT CONSULTANCY

# ಓದುವುದನ್ನು ಕಲಿಸುವ ವಿಧಾನಗಳು



ಮಾಂಟೆಸ್ಸರಿ (Montessori)ಯಲ್ಲಿ ಮಕ್ಕಳಿಗೆ ಓದಲು ಕಲಿಸುವ ವಿಧಾನವನ್ನು ಫೋನೆಟಿಕ್ಸ್ (phonetics)ಎಂದು ಕರೆಯುತ್ತಾರೆ. ಮಕ್ಕಳಿಗೆ ಮಾತನಾಡುವ ಭಾಷೆಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವ ಶಕ್ತಿ ಇದ್ದಾಗ, ಈ phonetics ವಿಧಾನ ಅತಿ ಉತ್ತಮವಾಗಿ ಪರಿಣಾಮ ಬೀರುತ್ತದೆ. ಆದರೆ, ಯಾವುದೇ ಭಾಷೆಯನ್ನು ಮಾಂಟೆಸ್ಸರಿ ವಿಧಾನದಿಂದ ಮಕ್ಕಳಿಗೆ ಕಲಿಸುವಾಗ, ಫೋನೆಟಿಕ್ಸ್ ನೊಂದಿಗೆ ಬೇರೇ ವಿಧಾನಗಳನ್ನೂ ಸಹ ಅದರ ಜೊತೆಗೆ ಉಪಯೋಗಿಸಲಾಗುತ್ತದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅವಶ್ಯಕ. ಮಾಂಟೆಸ್ಸರಿ ವಿಧಾನದಿಂದ ಬರೀ ಫೋನೆಟಿಕ್ಸ್ ನ್ನು ಬೇರೆ ಮಾಡಿ ಅದೊಂದನ್ನೇ ಉಪಯೋಗಿಸಿದರೆ, ಅದರಿಂದ ಒಳ್ಳೆಯದಾಗುವುದಕ್ಕಿಂತ ಹೆಚ್ಚು ತೊಂದರೆಯೇ ಆಗಬಹುದು.

**ಸುಜಾತ ಕುಮಾರ್**, Montessorian

ಯಾವುದೇ ಭಾಷೆಯ ಪರಿಚಯ ಮಾಡಿಸುವಾಗ (ಭಾರತೀಯ ಅಥವಾ ಹೊರದೇಶಗಳ), ಅದರ ಮೂಲ ಹಂತಗಳು ಒಂದೇ ಆಗಿರುತ್ತವೆ.

ಕೇಳಿಸಿಕೊಳ್ಳುವುದು---ಮಾತನಾಡುವುದು---ಓದುವುದು---ಬರೆಯುವುದು

ನೀವು ಈ ಬಗ್ಗೆ ಒಂದು ನಿಮಿಷ ಪರಿಶೀಲಿಸಿದರೆ, ಕನ್ನಡ, ಹಿಂದಿ, ಇಂಗ್ಲಿಷ, ಫ್ರಂಚ್ ಅಥವಾ ಯಾವುದೇ ಭಾಷೆಯಾಗಲಿ, ಈ ನಿಯಮ ಎಲ್ಲಕ್ಕೂ ಅನ್ವಯವಾಗುತ್ತದೆಂದು ನಿಮಗೆ ಸ್ಪಷ್ಟವಾಗುತ್ತದೆ. ದೈಹಿಕ ತೊಂದರೆಗಳನ್ನು ಬಿಟ್ಟು ಬೇರೇ ಯಾವುದೇ ಕಾರಣಕ್ಕೂ ಸಹ ಈ ಸರಣಿ ಬದಲಾಗುವುದಿಲ್ಲ. ದೈಹಿಕ ತೊಂದರೆಗಳಿದ್ದಲ್ಲೂ ಸಹ, ಓದುವುದು ಹಾಗೂ ಬರೆಯುವದಕ್ಕೂ ಮೊದಲು ಯಾವುದಾದರೂ ರೀತಿಯಲ್ಲಿ ಮಕ್ಕಳು ಭಾಷೆಯನ್ನು ಗ್ರಹಿಸಿ ಅದನ್ನು ಅಭಿವ್ಯಕ್ತಗೊಳಿಸುತ್ತಾರೆ.

ಈ ಭಾಗದಲ್ಲಿ ಶಾಲೆಗೇ ಹೋಗುವುದಕ್ಕೂ ಮುಂಚೆ ಮಕ್ಕಳಿಗೆ ಓದುವುದನ್ನು ಕಲಿಸುವ ಹಲವು ಪ್ರಮುಖ ವಿಧಾನಗಳ ಸಾರಾಂಶವನ್ನು ನೀಡಲಾಗಿದೆ. ತಾಯಿತಂದೆಯರಾಗಲಿ,ಶಿಕ್ಷಕರಾಗಲಿ, ಇದರಲ್ಲಿ ಯಾವುದೇ ವಿಧಾನವನ್ನು ಅನುಸರಿಸಿದರೂ, ಅವರು ಸಫಲರಾಗಲು ಬೇಕಾಗುವ ಮುಖ್ಯ ಅಂಶಗಳು ತಾಳ್ಮೆ, ಸ್ಥಿರತೆ ಹಾಗೂ ಸೃಜನಶೀಲತೆ.

## I. Phonics Method (ಫೋನಿಕ್ಸ್ ಪದ್ಧತಿ)

ಶಿಶುವಿಹಾರದ ಮಕ್ಕಳಿಗೆ ಓದಲು ಹೇಳಿಕೊಡುವ ರೀತಿಗಳಲ್ಲಿ ಅತ್ಯಂತ ವ್ಯಾಪಕವಾಗಿ ಉಪಯೋಗಿಸಲ್ಪಡುವಂತಹ ಪದ್ಧತಿ ಇದು. ಈ ಪದ್ಧತಿ ಮಕ್ಕಳಿಗೆ ವಿವಿಧ ಅಕ್ಷರಗಳು ಹಾಗೂ ಅವುಗಳಿಂದ ಹೊರಡುವ ಬೇರೆ ಬೇರೆ ಶಬ್ದಗಳ ಪರಿಚಯ ಮಾಡಿಸುವುದರ ಮೇಲೆ ಕೇಂದ್ರೀಕರಿಸುತ್ತದೆ. ಮಕ್ಕಳು ಅಕ್ಷರಗಳು ಹಾಗೂ ಅವುಗಳಿಂದ ಹೊರಡುವ ಶಬ್ದ ಗಳನ್ನು ಗುರುತಿಸುವುದನ್ನು ಕಲಿತಮೇಲೆ 2,3,4 ಅಕ್ಷರಗಳನ್ನು ಸೇರಿಸಿ ಪದಗಳನ್ನು ಮಾಡಿ ಅದಕ್ಕೆ ಹೊಂದುವ ಶಬ್ದವನ್ನು ಕಲಿಸಬೇಕು. ಮಕ್ಕಳು ಓದುವುದನ್ನು ಕಲಿಯಲು ಈ ಪದ್ಧತಿ ಬಹಳ ಸಹಕಾರಿಯಾಗುತ್ತದೆ ಹಾಗೂ ಅಕ್ಷರಗಳನ್ನು ಸಂಯೋಜಿಸಿ ಪದಗಳನ್ನು ಓದಲು ಕಲಿಯಲು ಬಹಳ ಉತ್ತಮವಾದ ಆಧಾರವಾಗುತ್ತದೆ.

ಯುರೋಪ್ ಹಾಗೂ ಅಮೆರಿಕದಲ್ಲಿ ಬಹಳ ವರ್ಷಗಳಿಂದ ಮಕ್ಕಳಿಗೆ ಓದುವುದನ್ನು ಕಲಿಸಲು ಇದೇ ಪದ್ಧತಿಯನ್ನು ಬಹಳ ಯಶಸ್ವಿಯಾಗಿ ಉಪಯೋಗಿಸಲಾಗಿದೆ. ಇದು ವಿದ್ಯಾರ್ಥಿಗಳಿಗೆ ಅವರ ಶಬ್ದಕೋಶವನ್ನು ಹೆಚ್ಚಿಸಿಕೊಳ್ಳಲು ಸಹಾಯಮಾಡುವ ಒಂದು ಸಾಧನ. ಸಾಮಾನ್ಯವಾಗಿ 5,6 ವರ್ಷದ ಮಕ್ಕಳು ಈ ಪದ್ಧತಿಯನ್ನು ಅನುಸರಿಸಿ ಓದಲು ಕಲಿಯುತ್ತಾರೆ. ಶಿಕ್ಷಕರು ಮಕ್ಕಳಿಗೆ ಈ ವಿಧಾನದ ಬಗ್ಗೆ ಹೆಚ್ಚಿನ ಮಾಹಿತಿ ನೀಡಬೇಕು ಮತ್ತು ಸಂಭಂದಿಸಿದ ನಿಯಮಗಳ ಹಾಗೂ ಸೂತ್ರಗಳ ಪರಿಚಯ ಮಾಡಿಸಬೇಕು.

Look and say / whole language approach (ನೋಡಿ ಹೇಳುವ ವಿಧಾನ) ಅನುಭವಿ, ನುರಿತ ಬಹಳಷ್ಟು ಶಿಕ್ಷಕರು ಓದುವುದನ್ನು ಕಲಿಸಲು ಈ ವಿಧಾನವನ್ನು ಧೃಡವಾಗಿ ನಂಬುತ್ತಾರೆ.ಈ 'ನೋಡಿ ಹೇಳುವ'

ವಿಧಾನದಲ್ಲಿ, ಮಕ್ಕಳು ಅಕ್ಷರಗಳ ಶ ಬ್ದಗಳ ಬದಲು ಪದಗಳು ಅಥವಾ ಪೂರ್ತಿ ವಾಕ್ಯಗಳನ್ನು ಗುರುತುಹಿಡಿಯುವುದನ್ನು ಕಲಿಯುತ್ತಾರೆ. ವಿದ್ಯಾರ್ಥಿಗಳು ಶಿಕ್ಷಕರು ಹೇಳಿದ ಪದವನ್ನು ನೋಡಿ,ಅದರೊಂದಿಗೆ ಅವರು ಮಾಡುವ ಶಬ್ದವನ್ನು ಕೇಳಿ,ಅದನ್ನು ಪುನರಾವರ್ತಿಸುತ್ತಾರೆ. ಈ ವಿಧಾನದಲ್ಲಿ ಬೇರೆ ಬೇರೆ ಪದಗಳನ್ನು ಬೇರೆ ಬೇರೆ ರೊಟ್ಟಿನತುಂಡುಗಳ ಮೇಲೆ ಬರೆದು, ಆ ಪದಗಳಿಗೆ ಸಂಭಂದಪಟ್ಟ ಚಿತ್ರಗಳೊಂದಿಗೆ ಉಪಯೋಗಿಸಿ ಮಕ್ಕಳಿಗೆ ಕಲಿಸಲಾಗುತ್ತದೆ. ಈ ವಿಧಾನವನ್ನು 'picture reading'(ಚಿತ್ರವನ್ನು ಓದುವುದು) ಅಥವಾ 'sight reading method' (ವೀಕ್ಷಿಸಿ ಓದುವ ವಿಧಾನ) ಎಂದು ಸಹ ಹೇಳುತ್ತಾರೆ. ಈ ಪದ್ಧತಿಯಲ್ಲಿ, ಮಕ್ಕಳು ಸಾಮಾನ್ಯವಾಗಿ ಉಪಯೋಗಿಸುವ ಪದಗಳ ನಮೂನೆ ಗುರುತಿಸಿ ಓದಲು ಕಲಿಯುತ್ತಾರೆ. ಸಾಂಪ್ರದಾಯಿಕವಾಗಿ ಮಕ್ಕಳಿಗೆ ಓದುವುದನ್ನು ಕಲಿಸುವುದಕ್ಕೆ ಬಹಳ ಮುಂಚಿತವಾಗಿ ಮಕ್ಕಳಿಗೆ ಚಿತ್ರಗಳನ್ನು ತೋರಿಸಿ ಪದಗಳನ್ನು ಗುರುತಿಸುವ ಅಭ್ಯಾಸವನ್ನು ಆರಂಭ ಮಾಡಲಾಗುತ್ತದೆ. ಆದರೆ ಈ ಪದ್ಧತಿಯಿಂದ ಮಕ್ಕಳು ಬಹಳ ಮಟ್ಟಿಗೆ ಉರುಹಚ್ಚಿ ಅಭ್ಯಾಸ ಮಾಡಿ ನೆನಪಿಟ್ಟುಕೊಳ್ಳುವುದರ ಮೇಲೆ ಅವಲಂಬಿಗಳಾಗ ಬಹುದು; ಹಾಗೂ ಕಲಿಯುವುದು ಅರ್ಥಪೂರ್ಣವಾಗಿಲ್ಲದೆ ಇರಬಹುದು.

(1) ಸರಿಯಾದ ಪ್ರೇರಣೆ (2) ಒಳ್ಳೆಯ ಸಾಹಿತ್ಯ ಸಿಗುವ ಸಾಧ್ಯತೆ (3)ಓದಲು ಬಹಳ ಅವಕಾಶಗಳು (4)ಅರ್ಥದ ಮೇಲೆ ಲಕ್ಷ್ಯ ಹಾಗೂ (5) ಗೊತ್ತಿಲ್ಲದ ಪದಗಳ ಉಚ್ಚಾರಣೆಗೆ ಸುಳಿವು ನೀಡಿ ಸಹಾಯ ಮಾಡುವವರು ಇವೆಲ್ಲ ಸಿಕ್ಕಿದರೆ ಮಕ್ಕಳು ಓದಲು ಕಲಿಯಬಲ್ಲರೆಂಬ ಮೂಲ ತತ್ವವೇ ಈ ವಿಧಾನದ(whole language approach) ಆಧಾರಸ್ಥಂಬವಾಗಿದೆ. ಈ ರೀತಿಯ ಕಲಿಯುವಿಕೆಯನ್ನು ಪ್ರತಿಪಾದಿಸುವವರ ಪ್ರಕಾರ, ಫೋನಿಕ್ಸ್ ವಿಧಿ ಹೊಸದಾಗಿ ಓದುವುದನ್ನು ಕಲಿಯುವವರಿಗೆ ಓದಿದ್ದರ ಅರ್ಥವನ್ನು ಪಡೆಯಲು ಸಹಾಯ ಮಾಡುವುದಿಲ್ಲ. ಅವರ ಪ್ರಕಾರ, ಪದಗಳನ್ನು ವಿಭಜಿಸಿ ಚಿಕ್ಕ ಚಿಕ್ಕ ಚೂರುಗಳನ್ನಾಗಿ ಮಾಡಿ ಮತ್ತೆ ಒಟ್ಟುಗೂಡಿಸುವುದರಿಂದ, ಅದು ಬರಹಗಾರರ ಭಾವನೆ/ದ್ರುಷ್ಟಿಕೋನವನ್ನು ಸರಿಯಾಗಿ ನೀಡುವುದಿಲ್ಲ.

## Language experience approach

(ಅನುಭವದಿಂದ ಕಲಿಯುವ ರೀತಿ)

ಈ ವಿಧಾನದಲ್ಲಿ ಕಲಿಯುವವರ ಸ್ವಂತ ಅನುಭವದ ಮೇಲೆ ಕತೆಗಳನ್ನು ಹಾಗೂ ಕಾರ್ಯಗಳನ್ನು ರೂಪಿಸಿ ಅದರಿಂದ ಅವರಿಗೆ ಓದುವುದನ್ನು ಕಲಿಯಲು ಸಹಾಯ ಮಾಡಲಾಗುತ್ತದೆ. ಈ ವಿಧಾನದಲ್ಲಿ ಮಗುವಿಗೆ ಕಲಿಸುವವರು ಮಗುವಿನ ಅನುಭವಗಳನ್ನಧಾರಿಸಿ ಕತೆಯನ್ನು ಬರೆದು,ಅದನ್ನು ಮಗುವಿನ ಮುಂದೆ ಓದಬೇಕು ಹಾಗೂ ಮಗು ಓದಿದ ಪದವನ್ನು ಬರೆದಿರುವ ಪದದ ಜತೆಗೆ ಸಂಬಂಧಿಸುವವರೆಗೂ ಮುಂದುವರಿಸಬೇಕು. ಈ ವಿಧಾನದಿಂದ ಹಲವಾರು ಲಾಭಗಳಿವೆ:

- ಇದರಿಂದ ಓದುವುದು, ಬರೆಯುವುದು, ಭಾಷೆ ಹಾಗೂ ಕಲೆ ಎಲ್ಲವೂ ಒಟ್ಟುಗೂಡುತ್ತವೆ.
- ಇದು ಕತೆ ಹೇಳುವುದರಲ್ಲಿ ಕಲಿಯುವವರ ಸೃಜನಶಕ್ತಿಯನ್ನು ಹೆಚ್ಚಿಸುತ್ತದೆ.
- ನಾವು ಯೋಚನೆಮಾಡಿದ್ದನ್ನು/ನಮ್ಮ ಮನಸ್ಸಿನಲ್ಲಿರುವುದನ್ನು ಹಾಗೂ ನಾವು ಹೇಳಿದ್ದನ್ನು ಬರೆಯಬಹುದು ಎಂದು ಕಲಿಯುವವರಿಗೆ ಅರ್ಥವಾಗುತ್ತದೆ.
- ಇದು ಕಲಿಯುವವರ ಅನುಭವಗಳನ್ನಾಧಾರಿಸುವುದರಿಂದ, ಕಲಿಯುವವರ ಆಲೋಚನೆಗಳು ಹಾಗೂ ಭಾಷೆಗೂ ಬೆಲೆ ಇದೆ ಎಂಬುದನ್ನು ತೋರಿಸುತ್ತದೆ.
- ಕಲಿಯುವವರ ನೈಜ ಭಾಷೆಯನ್ನು ಉಪಯೋಗಿಸು ವುದರಿಂದ, ಇದು ಓದಬಹುದಾದ ಮತ್ತು ಗೊತ್ತಿರುವ ವಿಚಾರದ ಬಗ್ಗೆ ಓದುವ ಸಾಮಗ್ರಿ ನೀಡುತ್ತದೆ.

ಮಕ್ಕಳು ಯಾವುದಾದರೂ ಚಿತ್ರದ ಬಗ್ಗೆ ಅಥವಾ ಒಂದು ಘಟನೆಯ ಬಗ್ಗೆ ಹೇಳಿದ್ದನ್ನು ಶಿಕ್ಷಕರು ಬರೆದು, ಆಮೇಲೆ ಜೋರಾಗಿ ಓದುತ್ತಾರೆ. ಇದೇ ರೀತಿ ಹಲವು ವಾಕ್ಯಗಳು ಕೂಡಿದಾಗ ಅದು ಮಕ್ಕಳ ಓದುವ ಸಾಮಗ್ರಿಯಾಗುತ್ತದೆ. ಈ ಓದುವ ಸಾಮಗ್ರಿ ನೇರವಾಗಿ ಮಕ್ಕಳ ಸ್ವಂತ ಸನ್ನಿವೇಶಗಳು ಹಾಗೂ ಅನುಭವಗಳ ಮೇಲೆ ಅಧಾರಿಸಿದ್ದಾ ದ್ದರಿಂದ ಹೆಚ್ಚಿನ ಶಿಕ್ಷಕರು ಮಕ್ಕಳಿಗೆ ಮೊದಲ ಬಾರಿ ಓದಿ ಹೇಳುವಾಗ ಇದನ್ನೇ ಉಪಯೋಗಿಸುತ್ತಾರೆ. ಅವರ ಪ್ರಕಾರ ಇದರಿಂದ ಓದಲು ಮಕ್ಕಳ ಆತ್ಮವಿಶ್ವಾಸ ಹೆಚ್ಚುತ್ತದೆ.

**ಅನುಭವಿ ಶಿಕ್ಷಕರು ಹೆಚ್ಚಿನ ಸಾಧನೆಗಾಗಿ ಈ ಎಲ್ಲಾ ವಿಧಾನಗಳ ಆಧಾರದ ಮೇಲೆ ತಮ್ಮದೇ ಆದ ಒಂದು ರೀತಿಯನ್ನು ಕಂಡುಕೊಳ್ಳುತ್ತಾರೆ. ಕೆಲವರು ಬಹಳ ಚಿಕ್ಕ ಮಕ್ಕಳಿಗೆ ಅವರ ಅನುಭವದ ಆಧಾರದ ಮೇಲೆ ಬರೆದಿರುವುದರಿಂದ (language experience approach) ಆರಂಭಿಸಿ ನಂತರ ಶಬ್ದ ಹಾಗೂ ಸಂಕೇತ/ಚಿಹ್ನೆಯ ಹೊಂದಿಕೆಯನ್ನು ತೋರಿಸಲು ಫೋನೆಟಿಕ್ಸ್ (Phonics approach) ವಿಧಾನವನ್ನು ಉಪಯೋಗಿಸಿ ಕಡೆಗೆ ಅಸಾಮಾನ್ಯ/ಬೇರೆ ಪದಗಳಿಗೆ ನೋಡಿ ಹೇಳುವ (look and say) ವಿಧಾನವನ್ನು ಬಳಸುತ್ತಾರೆ.**

samyukta
CHILD DEVELOPMENT CONSULTANCY

## Letters To The Editor

**We plan to grow and thrive from our reader responses. Please feel free to write in to us, by mail or post.**

**We will try to publish as many responses as we can.**

**Your responses are awaited at mahiti@samyuktacdc.com**



### *Editor's choice- For teaching Hindi*

as a second language refer article “Teaching and Learning Hindi as a 'Second' Language: Exploring a new Terrain

Chandrika Mathur *Rishi Valley School, Chittoor District, India, Journal of Krishnamurti Schools, May 2001, vol 5 .*
*www.journal.kfionline.org*

## Resource Corner

**ಮಕ್ಕಳಿಗೆ ಓದಿಹೇಳಲು ಆರಿಸುವ ಪುಸ್ತಕಗಳು**

- Dr. Seuss Series (www.seussville.com)
- Ladybird Phonics Readers series (www.ladybird.co.uk)

**ಕಲಿಸುವ ವಿಧಾನಗಳಿಗಾಗಿ ಶಿಕ್ಷಕರಿಗೆ**

- www.teachingtreasures.com.au
- www.phonics.com
- www.preschooleducation.com

samyukta
CHILD DEVELOPMENT CONSULTANCY

**Samyukta Child Development Consultancy**

GF1, Jeevanadi Summit,4B Sri Rama Temple Street,
New Thippasandra,Bangalore-560075
**www.samyuktacdc.com**
**(+91) 98445 25045**

**For Private Circulation Only**